Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



40h year of Service and Fellowship


Volume 40 Issue - 11 18th September 2025

## FAMILY GETTOGETHER
## CELEBRATION OF AWARDS 2024-25


Host : Rtn. S. Vijaya Shetty, Rtn. Krishna Kanchan, Rtn. Vivian Crasto, Rtn. Mahendra Shetty, Rtn. Johnson Almeida, Rtn. Arun Mendonca, Rtn. Regan Lobo

Time : 7.00 p.m.

Venue : St. Philomena Commercial Park auditorium, Voderhobli, Basrur Road



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

# ಸಂಪಾದಕೀಯ :



ರೋಟರಿ ಬಂಧುಗಳೇ,

ನಾವು ಬದುಕುತ್ತಿರುವ ಸಮಾಜದಲ್ಲಿ ಎಷ್ಟೋ ಕುಂದು ಕೊರತೆಗಳನ್ನು ನೋಡುತ್ತೇವೆ ಹಾಗೂ ನೋಡಿಯೂ ನಮ್ಮಲ್ಲೇ ನಾವು ಅಂದುಕೊಳ್ಳುತ್ತೇವೆ. ಯಾರಾದರೂ ಇದನ್ನು ಸರಿಪಡಿಸಲಿಕ್ಕಾಗುವುದಿಲ್ಲವೇ? ಅಂದರೇ ಸಹಾಯ ಮಾಡುವ ಮನಸ್ಸು ಹೃದಯ ಎಲ್ಲರಿಗೂ ಇರುತ್ತದೆ. ಆದರೆ ಅದನ್ನು ಎಕ್ಸಿಕ್ಯೂಟ್ ಮಾಡುವ ಅನುಕೂಲತೆ ವ್ಯಕ್ತಿಯೋರ್ವನಲ್ಲಿ ಇರುವುದಿಲ್ಲ. ಆಗ ಸಮಾನ ಮನಸ್ಕ ವ್ಯಕ್ತಿಗಳು ಒಗ್ಗೂಡಿದಾಗ ಹನಿ ಹನಿ ಗೂಡಿದರೆ ಹಳ್ಳ ಎಂಬ ಗಾದೆಯಂತೆ ಆ ಕುಂದು ಕೊರತೆಗಳನ್ನು ಸರಿಪಡಿಸಲು ಬೇಕಾಗುವ ಮಾನವ ಶಕ್ತಿ ಹಾಗೂ ಸಂಪತ್ತು ಒಟ್ಟಾಗಿ ಯೋಜಿಸಿದ ಕಾರ್ಯವು ಕೈಗೂಡುತ್ತದೆ. ಮೊನ್ನೆ ನಡೆದ ವಾರದ ಸಭೆಯಲ್ಲಿ ರೊ. ಜಯಕರ್ ಶೆಟ್ಟಿ ಅವರು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕುಂದಾಪುರದ ಅಧ್ಯಕ್ಷರಾಗಿ ಸಮಾನ ಮನಸ್ಕ ಹೃದಯವಂತರನ್ನು ಒಗ್ಗೂಡಿಸಿ ಕುಂದಾಪುರದಲ್ಲಿ ಜನ ಔಷಧಿ ಕೇಂದ್ರವನ್ನು ಸ್ಥಾಪಿಸಿ ಅತ್ಯಂತ ಕಡಿಮೆ ದರದಲ್ಲಿ ಜನರಿಗೆ ಔಷಧಿಯ ಸೇವೆಯನ್ನು ನೀಡುತ್ತಿದ್ದು, ಬಡವನೋರ್ವನ ಹೊರೆಯನ್ನು ಇಳಿಸಿದ ನೈಜ ಸಮಾಜ ಸೇವೆಯ ಯಶೋಗಾಥೆ ಮನಸ್ಸಿಗೆ ತುಂಬಾ ಹಿಡಿಸಿತು. "ಬಡತನ ಬರಬಾರದು ಹಾಗೂ ಬಡವರಿಗೆ ಖಾಯಿಲೆ ಬರಬಾರದು" ನನ್ನ ಮಿತ್ರರೋರ್ವರು ಅಂದರೆ 60 ರ ಪ್ರಾಯದ ಮಧ್ಯಮವರ್ಗದ ವ್ಯಕ್ತಿ ಜನ–ಔಷಧಿಯಿಂದ ಅವರ ಹೃದಯ ಕ್ಕೆ ಸಂಬಂಧಿಸಿದ ಔಷಧಿಯನ್ನು ಖರೀದಿಸಿ ನನಗೆ ಎದುರು ಸಿಕ್ಕಿ ಹೇಳಿದ ಮಾತು – "ಸರ್ ಪ್ರತೀ ತಿಂಗಳು ನನಗೆ ರೂ. 3000 ದಿಂದ ರೂ. 5000/– ವರೆಗೆ ಖರ್ಚು ಆದರೆ ಈಗ ಈ ಜನ ಔಷಧಿ ಕೇಂದ್ರದಿಂದ ಕೇವಲ ರೂ. 500/– ಖರ್ಚು ಆಗುತ್ತಿದೆ ಎಂಥಾ ಉಪಕಾರ ನಮಗಾಗುತ್ತಿದೆ ಎಂದ. ಬರೀ ಕಡಿಮೆ ಲಾಭ ಬರುವ ಈ ಔಷಧ ಕೇಂದ್ರದಿಂದ ಬರುವ ಲಾಭ ಸಂಪೂರ್ಣ ಸಮಾಜ ಸೇವೆಗೆ ವಿನಿಯೋಗಿಸುವ ಈ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯ ಶ್ಲಾಘನೀಯ ಅಲ್ಲವೇ. ಇದೇ ರೀತಿ ನಮ್ಮ ಕಸಿನ್ ಸುಪ್ರಿಯಾ ಕಾಮತ್ ಬ್ಯಾನರ್ಜಿ ನಮ್ಮ ರೋಟರಿ ಮುಖಾಂತರ ಪ್ರತೀ ವರುಷ ರೂ. 60,000 ಕೊಟ್ಟು ಒಬ್ಬ ಬಡ ವಿದ್ಯಾರ್ಥಿಯನ್ನು ಬಿ.ಬಿ. ಹೆಗ್ಡೆ ಕಾಲೇಜಿನಲ್ಲಿ ಪದವಿ ಓದಿಸುವುದರಿಂದ ಪ್ರೇರಿತರಾಗಿ ಇಂದು ಸರಿ ಸುಮಾರು 20 ಕ್ಕೂ ಹೆಚ್ಚು ಸಮಾನ ಮನಸ್ಕರು ಒಗ್ಗೂಡಿ ಅದೇ ಕಾಲೇಜಿನ 35 ಬಡ ವಿದ್ಯಾರ್ಥಿಗಳನ್ನು ಪದವಿ ಓದಿಸುತ್ತಿದ್ದಾರೆ ಎಂಥಾ ಪುಣ್ಯದ ಕೆಲಸ!. ಮಿತ್ರರೇ ಇದೇ ರೋಟರಿ ಮಾಡುತ್ತಿರುವ ಕೆಲಸವಲ್ಲವೇ? ಇಂದು ಜಗತ್ತಿನಲ್ಲೇ ಪೋಲಿಯೋ ನಿರ್ಮೂಲನೆಗಾಗಿ ವಿನಿಯೋಗಿಸಿದ ಸಂಪತ್ತು ಹಲವು ಮಿಲ್ಲಿಯನ್ ಡಾಲರ್‌ಗಳು. ನಮ್ಮೂರಿನಲ್ಲೇ ನೋಡುವ ಶಾಲೆಗಳ ಅಭಿವೃದ್ಧಿ, ಆಸ್ಪತ್ರೆಗಳ ಅಭಿವೃದ್ಧಿ ಶಿವಮೊಗ್ಗ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಬ್ಲಡ್ ಬ್ಯಾಂಕ್, ಮಕ್ಕಳಿಗಾಗಿ ಉದ್ಯಾನವನ, ನರ್ಸರಿ ಶಾಲೆಗಳು, ವಿಶೇಷ ಮಕ್ಕಳ ಶಾಲೆ ಇತ್ಯಾದಿ ಪುಣ್ಯ ಕೆಲಸಗಳಿಂದ ರೋಟರಿಯೇ ನಮಗೊಂದು ನೈಜ ಮಾದರಿಯಾಗಿದೆ ಎಂದರೆ ಅತಿಶಯೋಕ್ತಿ ಅಲ್ಲ.

**– ರೊ. ರಮಾನಂದ ಕಾರಂತ್**

## ವಾರದ ಸಭೆಯ ವರದಿ




ತಾ||11/09/2025 ಗುರುವಾರದಂದು ನಮ್ಮ ವಾರದ ಸಭೆಗೆ ರೊ. ಜಯಕರ್ ಶೆಟ್ಟಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಜನ ಔಷಧಿಯ ಮಹತ್ವ, ಅದರ ಕಾರ್ಯವ್ಯಾಪ್ತಿ, ಯಾವೆಲ್ಲಾ ಔಷಧಿಗಳು ಲಭ್ಯವಿದೆ ಎಷ್ಟು ತರವಾದ ಸರ್ಜಿಕಲ್ ಐಟಂಗಳು ಲಭ್ಯವಿದೆ ಹಾಗೂ ಯಾವುದೇ ಮಧ್ಯವರ್ತಿಗಳಿಲ್ಲದೇ ಉತ್ಪಾದನಾ ಕೇಂದ್ರದಿಂದ ಸೀದ ಜನ ಔಷಧಿ ಕೇಂದ್ರಕ್ಕೆ ಹೇಗೆ ಬರುತ್ತದೆ ಹಾಗೂ ಬಂದ ಲಾಭವನ್ನು ಸರಕಾರಿ ಕಾಲೇಜುಗಳಿಗೆ, ಹಿಂದುಳಿದ ವರ್ಗದ ವಿದ್ಯಾರ್ಥಿನಿಗಳ ವಸತಿನಿಲಯಕ್ಕೆ ಸ್ಯಾನಿಟರಿ ಪ್ಯಾಡ್ಸ್ ವಿತರಣೆ, ಆಸ್ಪತ್ರೆಯ ಖರ್ಚನ್ನು ಭರಿಸಲಾಗದ ವಿವಿಧ ಆಸ್ಪತ್ರೆಗಳಲ್ಲಿರುವ ಬಡ ರೋಗಿಗಳ ಆಸ್ಪತ್ರೆ ಬಿಲ್ಲ್ ಪಾವತಿಸುವುದು. ಅಂಗವಿಕಲರಿಗೆ ವೀಲ್ ಚೇರ್ ಗಳನ್ನು ನೀಡುವುದು, ಎಂಡೋ ಸಲ್ಫಾನ್ ಪೀಡಿತರಿಗೆ ನೆರವನ್ನು ನೀಡುವುದು ಮುಂತಾದ ಸಮಾಜಮುಖಿ ಕಾರ್ಯಗಳಿಗೆ ವಿನಿಯೋಗ ಮಾಡುತ್ತಿದ್ದೇವೆ ಎಂದು ಸವಿವರವಾಗಿ ತಿಳಿಸಿದರು. ಆಗಮಿಸಿದ ಸರ್ವರನ್ನೂ ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತ ವಾರದ ವರದಿ ವಾಚಿಸಿದರು. ರೊ. ಶ್ರೀನಿವಾಸ್ ಶೇಟ್ ಪ್ರಾರ್ಥನೆ ನೆರವೇರಿಸಿದರು. ರೊ. ಜುಡಿತ್ ಮೆಂಡೋನ್ಸಾ ರೋಟರಿ ಮಾಹಿತಿ ತಿಳಿಸಿದರು. ರೊ. ದೋಮ ಚಂದ್ರಶೇಖರ್ ವಾರದ ಚಿಂತನೆ ಮಂಡಿಸಿದರು. ಆಗಮಿಸಿದ ಅತಿಥಿಗಳನ್ನು ರೊ. ಕೃಷ್ಣ ಕಾಂಚನ್ ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಪಿ.ಹೆಚ್.ಎಫ್. ಆದ ರೊ. ಮನೋಹರ್ ಭಟ್ ಅವರನ್ನು ಅಭಿನಂದಿಸಲಾಯಿತು. ಹಾಗೂ ಟಿ.ಆರ್.ಎಫ್. ಗೆ ದೇಣಿಗೆ ನೀಡಿದ ರೊ. ವಾಸುದೇವ ಕಾರಂತರನ್ನು ಅಭಿನಂದಿಸಲಾಯಿತು. ರೊ. ಸತ್ಯನಾರಾಯಣ್ ಪುರಾಣಿಕ್ ಅವರಿಗೆ ಮೊಮ್ಮಗಳಾದ ಪ್ರಯುಕ್ತ ಹಾಗೂ ರೊ. ಓಸಲಿನ್ ರೆಬೆಲ್ಲೋ ಅವರಿಗೆ ಉಡುಪಿ ಜಿಲ್ಲಾ ಕೇಟರಿಂಗ್ ಅಸೋಸಿಯೇಶನ್ ಅಧ್ಯಕ್ಷರಾದ ಪ್ರಯುಕ್ತ ಅಭಿನಂದಿಸಲಾಯಿತು. ರೊ. ಡಾ. ಉತ್ತಮ್ ಕುಮಾರ್‌ಶೆಟ್ಟಿ ಅವರು ಸಭೆಯ ಕೊನೆಯಲ್ಲಿ ಹಾಸ್ಯವನ್ನು ನೆರವೇರಿಸಿದರು ಹಾಗೂ ರೊ. ರಮಾನಂದ ಕಾರಂತ್ ಧನ್ಯವಾದವನ್ನು ಅರ್ಪಿಸಿದರು.

## ರೋಟರಿ ಕ್ಲಬ್ ಕುಂದಾಪುರ ದಕ್ಷಿಣದಿಂದ ಹೊಲಿಗೆ ತರಬೇತಿ ಶಿಬಿರ ಉದ್ಘಾಟನೆ






ರೋಟರಿ ಕ್ಲಬ್ ಕುಂದಾಪುರ ದಕ್ಷಿಣ, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಮತ್ತು ಆಲೂರು ಗ್ರಾಮ ಪಂಚಾಯತ್ ಸಂಯುಕ್ತ ಆಶ್ರಯದಲ್ಲಿ ಮೂರು ತಿಂಗಳ ಹೊಲಿಗೆ ತರಬೇತಿ ಶಿಬಿರವನ್ನು ಸೆಪ್ಟೆಂಬರ್ 15, 2025 ರಂದು ಆಲೂರು ಗ್ರಾಮದಲ್ಲಿ ಉದ್ಘಾಟಿಸಲಾಯಿತು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಸಂಯೋಜಕಿ ಶ್ರೀಮತಿ ರೇಣುಕಾ ಕಾರ್ಯಕ್ರಮ ನಿರೂಪಿಸಿದರು. ಅಧ್ಯಕ್ಷರು ಶ್ರೀ ಸಚಿನ ನಕ್ಕತಾಯ – "ರೋಟರಿಯ ಗುರಿಯೇ ಸಮಾಜಾಭಿವೃದ್ಧಿ. ಮಹಿಳೆಯರ ಸ್ವಾವಲಂಬನೆಗೆ ಹೊಲಿಗೆ ತರಬೇತಿಯಂತಹ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಬಹುಮುಖ್ಯವಾದವು. ಇಂತಹ ತರಬೇತಿ ಶಿಬಿರಗಳು ಮಹಿಳೆಯರಿಗೆ ಉದ್ಯೋಗಾವಕಾಶ ನೀಡುವುದರ ಜತೆಗೆ, ಸ್ವಂತ ಉದ್ಯಮ ಆರಂಭಿಸಲು ಪ್ರೇರಣೆಯಾಗುತ್ತದೆ. ರೋಟರಿ ಕ್ಲಬ್ ಶಿಕ್ಷಣ, ಆರೋಗ್ಯ, ಯುವಜನ ಶಕ್ತಿಕರಣ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿ ಸದಾ ಸಕ್ರಿಯವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸೇವಾ ಹಾಗೂ ವಿಕಾಸಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ."

ಆಲೂರು ಗ್ರಾಮ ಪಂಚಾಯತ್ ಅಧ್ಯಕ್ಷರು– "ಈ ತರಬೇತಿಯ ಮೂಲಕ ಮಹಿಳೆಯರು ಹೊಲಿಗೆ ಕೌಶಲ್ಯಪೂರ್ಣರಾಗಿ, ಸ್ವಂತ ಉದ್ಯಮ ಆರಂಭಿಸುವ ಮೂಲಕ ಕುಟುಂಬ ಮತ್ತು ಸಮಾಜದ ಆರ್ಥಿಕ ಬಲವನ್ನು ಹೆಚ್ಚಿಸಬಹುದು" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತಾ, ಸಮಾಜ ಸೇವಕ ಶ್ರೀ ನರಸಿಂಹ, ಧರ್ಮಸ್ಥಳ ಸಂಘದ ಇತರೆ ಸಂಯೋಜಕರು ಹಾಗೂ ಸ್ಥಳೀಯ ಗಣ್ಯರು ಉಪಸ್ಥಿತರಿದ್ದರು.

### ಉದಯವಾಣಿಯಲ್ಲಿ ಪ್ರಕಟವಾದ ನಮ್ಮ ಕ್ಲಬ್ಬಿನ ರಸ್ತೆ ಸುರಕ್ಷೆ ಕಾರ್ಯಕ್ರಮ



ಉದಯವಾಣಿ ಸುದಿನ

ಮಣಿಪಾಲ 2025 ಸೆಪ್ಟೆಂಬರ್ 11 ಗುರುವಾರ

**ರೋಟರಿ ಕ್ಲಬ್ ಕುಂದಾಪುರ: ರಸ್ತೆ ಸುರಕ್ಷೆ ಕಾರ್ಯಕ್ರಮ**

**ಕುಂದಾಪುರ, ಸೆ.10:** ಸಂಚಾರ ನಿಯಮಗಳನ್ನು ಪಾಲಿಸುವ, ಸುರಕ್ಷಿತವಾಗಿ ವಾಹನ ಚಲಾಯಿಸುವ ಮತ್ತು ಜೀವಗಳನ್ನು ಉಳಿಸುವ ಮಹತ್ವದ ಕುರಿತು ಎಲ್ಲರೂ ತಿಳಿದಿರಬೇಕು. ಇಂತಹ ನಿಟ್ಟಿನಲ್ಲಿ ಜಾಗೃತಿ ಮೂಡಿಸುತ್ತಿರುವುದು ಸ್ವಾಗತಾರ್ಹ ಎಂದು ಸಂಚಾರ ಠಾಣೆ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ನೂತನ್ ಹೇಳಿದರು.

ಅವರು ಇಲ್ಲಿನ ಶಾಸ್ತ್ರಿ ಸರ್ಕಲ್‌ನಲ್ಲಿ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ, ರೋಟರಿ ಕ್ಲಬ್ ಕುಂದಾಪುರ, ರೋಟರಿ ಕ್ಲಬ್ ಕುಂದಾಪುರ ಮಿಡ್‌ಟೌನ್ ಮತ್ತು ರೋಟರಿ ಕ್ಲಬ್ ಕುಂದಾಪುರ ಸನ್‌ರೈಸ್ ಕ್ಲಬ್‌ಗಳು ಜಂಟಿಯಾಗಿ ಆಯೋಜಿಸಿದ್ದ ರಸ್ತೆ ಸುರಕ್ಷತಾ ಕಾರ್ಯಕ್ರಮದಲ್ಲಿ ಎಲ್‌ಇಡಿ ವಿಡಿಯೋ ಮೂಲಕ ರಸ್ತೆ ಸುರಕ್ಷತಾ ಕಾರ್ಯಕ್ರಮ ಅನಾವರಣಗೊಳಿಸಿ ಮಾತನಾಡಿದರು.

ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಕುಂದಾಪುರದ ಅಧ್ಯಕ್ಷ ಎಸ್. ಜಯಕರ ಶೆಟ್ಟಿ ರಸ್ತೆ ಸುರಕ್ಷತೆ ಸ್ಟಿಕರ್‌ಗಳನ್ನು ಬಿಡುಗಡೆ ಮಾಡಿದರು.


ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಅಧ್ಯಕ್ಷ ಸಚಿನ್ ನಕ್ಕತ್ತಾಯ, ರಸ್ತೆ ಸುರಕ್ಷತೆ ಎಂಬುದು ಕೇವಲ ಕಾನೂನು ಪಾಲನೆ ಅಲ್ಲ, ಇದು ನಮ್ಮ ಮತ್ತು ಇತರರ ಜೀವನದ ಬಗ್ಗೆ ಕಾಳಜಿ ವಹಿಸುವುದು. ಪ್ರತಿದಿನ ರಸ್ತೆ ಅಪಘಾತಗಳಿಂದ ಅನೇಕ ಜೀವಗಳು ತೊಂದರೆಗೆ ಸಿಲುಕುತ್ತಿವೆ. ಈ ಕಾರ್ಯಕ್ರಮದ ಉದ್ದೇಶವು ಸಮುದಾಯದಲ್ಲಿ ಹೆಚ್ಚಿನ ಜಾಗೃತಿ ಮತ್ತು ಜವಾಬ್ದಾರಿಯನ್ನು ಮೂಡಿಸುವುದಾಗಿದೆ ಎಂದರು.

ರೋಟರಿ ಕ್ಲಬ್ ಕುಂದಾಪುರ ಮಿಡ್ ಟೌನ್‌ನ ಅಧ್ಯಕ್ಷ ಸುನಿಲ್ ಶೆಟ್ಟಿ ಹೇರಿಕುದ್ರು, ರೋಟರಿ ಕ್ಲಬ್ ಕುಂದಾಪುರ ಸನ್ ರೈಸ್‌ನ ಅಧ್ಯಕ್ಷ ಗುರುರಾಜ್ ಕೋಟ್ಯಾನ್, ರೋಟರಿ ಕ್ಲಬ್ ಕುಂದಾಪುರದ ಅಧ್ಯಕ್ಷ ನಾಗರಾಜ್ ಉಪಸ್ಥಿತರಿದ್ದರು.

### ವಾರದ ಚಿಂತನೆ

"ಲಂಚ ಗೌರವವನ್ನು ತಿನ್ನುತ್ತದೆ... ಕ್ರೋಧ ಬುದ್ಧಿಯನ್ನು ತಿನ್ನುತ್ತದೆ... ಚಿಂತೆ ಆಯುಸ್ಸನ್ನು ತಿನ್ನುತ್ತದೆ... ಅಹಂಕಾರ ಜ್ಞಾನವನ್ನು ತಿನ್ನುತ್ತದೆ... ನಮ್ರತೆ ಇಲ್ಲದಿದ್ದರೆ ವಿದ್ಯೆ ವ್ಯರ್ಥ, ಪ್ರಜ್ಞೆ ಇಲ್ಲದಿದ್ದರೆ ಪ್ರತಿಭೆ ವ್ಯರ್ಥ. , ಇವೆಲ್ಲವನ್ನೂ ಅರಿಯದಿದ್ದರೆ ಜೀವನವೇ ವ್ಯರ್ಥ."

**ನೀಡಿದವರು: ರೊ. ದೋಮ ಚಂದ್ರಶೇಖರ್**





Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath 1995-96



Rtn. B. C. Somayaji 1997-98



Rtn. S. Subraya Halambi 1999-2000



Rtn. K. Seetharama Nackathaya 2001-02



Rtn. Dr. Umesh Puthran 2003-04



Rtn. A. Shantharam Pai 2005-06

# Rotary Information

## CLUB SERVICE :

Club service works to strengthen fellowship of members through training and hospitality, Clubs have serious topics to work towards so having various social events that bring members and their guests informally and for fun, contributesgenuine fellowship.

Club service focusses on strengthening fellowship and ensuring the effective functioning of the clubs. The purpose of club service is to foster successful administration of the Rotary club. Club service is regarded by many Rotarians as the most important part of the club mechanism because without a well functioning club, little else can be performed via the other avenues of service - It promotes fellowship that binds the Rotarians together. Rotarian""- It makes members aware of their obligations, duties and responsibilities towards Rotary and the privilege of being a Rotarian. It builds on the principle of Classification, unique only to Rotary, bringing together a cross section of the society. It infuses the spirit of regular attendance amongst Rotarians to make them 'involved'. It aims at providing Rotary information to the members to keep them 'informed'.

-It plans weekly programs to keep the Rotarians interested' and keeps them 'updated through club bulletin. It promotes public relations and presents Rotary to the community. The district club service Director and the team consisting of chairmen and vice chairmen support the President and the club team to manage, coordinate, support, encourage and communicate with all those who are responsible for aspect...... of club service. An effective and well balanced club involves all the members in club service activities.

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

### ಹುಟ್ಟುಹಬ್ಬದ ಶುಭಾಶಯಗಳು



ರೊ. ಶೇಖರ ಕೆ. ಶೆಟ್ಟಿ
ದಿನಾಂಕ : ಸೆಪ್ಟೆಂಬರ್ 25
ಮೊಬೈಲ್ : 94484 55199




*This Bulletin is sponsored by :*
Rtn. Gerald Crasto
Mob. : 9880219948

For Private Circulation only

Email id – rotaryclub.kundapurasouth@gmail.com



Rtn. S. Sadananda Chatra 1996-97



Rtn. K. Suresh Kamath 1998-99



Rtn. S. Vijaya Shetty 2000-01



Rtn. U. S. Shenoy 2002-03



Rtn. Dr. B. V. Udupa 2004-05



Rtn. K. Shantharam Prabhu 2006-07



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24 | Rtn. Judith Mendonca 2024-25